*ಯೋಜನೆಯು ಪೂರ್ಣಗೊಳ್ಳದೇ ಅನೇಕ ಸಲ ಸಚಿವರು ಬಂದು ಉದ್ಘಾಟನೆ ಸಹ ಮಾಡಿದರೂ ಯೋಜನೆ ಕಾರ್ಯಗತವಾಗಿಲ್ಲ, ಕಾರಣವೇನು?*

*ಆ) ಈ ಯೋಜನೆಯನ್ನು ಯಾವಾಗ ಪ್ರಾರಂಭ ಮಾಡುವಿರಿ?*

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :

ಅ) ಈ ಯೋಜನೆಯು ಪೂರ್ಣಗೊಂಡಿದ್ದು ಈಗ ಕಾರ್ಯಾರಂಭಿಸಲು ಸಿದ್ಧವಾಗಿದೆ. ಆದರೆ ವಿದ್ಯುತ್ ಶಕ್ತಿಯ ಸಂಪರ್ಕ ಇನ್ನು ಸಿಗದೆ ಇರುವ ಕಾರಣ ಯೋಜನೆಯನ್ನು ಚಾಲೂ ಮಾಡಲು ತಡವಾಗಿದೆ.

ಆ) ವಿದ್ಯುತ್ ಸಂಪರ್ಕ ಸಿಕ್ಕಿದ ಕೂಡಲೇ ಪ್ರಾರಂಬ ಮಾಡಲಾಗುವುದು.

**ಬಂಟವಾಳ ತಾಲ್ಲೂಕಿನ ಬೆಂಜನ ಪದವುನಲ್ಲಿ ಕೈಗಾರಿಕಾ ಕೇಂದ್ರ**

356 - ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲಗಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಬಂಟ್ವಾಳ ತಾಲ್ಲೂಕಿನ ಬೆಂಜನಪದವು ಪ್ರದೇಶವನ್ನು ಕೈಗಾರಿಕಾ ಕೇಂದ್ರವನ್ನಾಗಿ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ?*

*ಆ) ಇದರ ವಿರುದ್ಧ ಸ್ಥಳೀಯರು ಚಳುವಳಿ ಹೂಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

*ಇ) ಈ ಬಗ್ಗೆ ಸರ್ಕಾರವು ಏನು ಕ್ರಮ ತೆಗೆದುಕೊಂಡಿದೆ?*

ಶ್ರೀ ಆರ್.ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲಗಳ ಅಭಿವೃದ್ಧಿ ಸಚಿವರು) :

ಅ) ಹೌದು.

ಆ) ಬಂದಿದೆ.

ಇ) ಈ ಜಮೀನಿನ ಭೂಸ್ವಾಧೀನದ ಬಗ್ಗೆ ಅಂತಿಮ ಅಧಿಸೂಚನೆ ಹೊರಡಿಸಿರುವುದಿಲ್ಲ. ಕಾರಣ, ಭೂಸ್ವಾಧೀನದ ವಿರೋಧದ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ.

**ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವನ್ನು ಹುಬ್ಬಳ್ಳಿಗೆ ವರ್ಗಾಯಿಸಿರುವುದು.**

357 - ಶ್ರೀ ರಾಜಶೇಖರ್ ವಿ. ಶೀಲವಂತ (ಗುಳ್ಳೇದಗುಡ್ಡ) : ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಕಛೇರಿಯನ್ನು ಹುಬ್ಬಳ್ಳಿಗೆ ವರ್ಗಾಯಿಸಿದರ ಉದ್ದೇಶವೇನು?*